GULBARGA UNIVERSITY
"Jnana Ganga", GULBARGA - 585 106, Karnataka, India.
08472-263202
Fax. 08472-263206
E-Mail: root @guluni.kar.nic.in
Grams: UNIGUL

ಕ್ರ.ಸಂ.ಗುವಿಗು/ವಿಮವಿ/ಬಿಓಎಸ್/2014-15/7883 ದಿನಾಂಕ: 21/2/15

**ಸುತ್ತೋಲೆ**

ವಿಷಯ:- ಎಂ.ಫಿಲ್./ಪಿಹೆಚ್.ಡಿ. ಪ್ರವೇಶಾತಿ 2014 ಕ್ಕೆ ಸಂಬಂಧಿಸಿದಂತೆ 371 (ಜೆ) ಹಾಗೂ ಹಿಂದಿನ ಗೈಡಲೈನ್ಸ್ ಅನುಸರಿಸುವ ಬಗ್ಗೆ.

ಉಲ್ಲೇಖ:- 1. ದಿನಾಂಕ 20.02.2015 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ
2. ಗುವಿಗು/ವಿಮವಿ/ಬಿಓಎಸ್/2014-15/7113 ದಿನಾಂಕ 01.12.2014
3. ಗುವಿಗು/ವಿಮವಿ/ಪಿಹೆಚ್.ಡಿ/2014-15/7827 ದಿನಾಂಕ 18.02.2015
4. ಕುಲಪತಿಗಳ ಅನುಮೋದನೆ ದಿನಾಂಕ 21.2.2015

ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2014 ನೇ ಸಾಲಿನ ಎಂ.ಫಿಲ್./ಪಿಹೆಚ್.ಡಿ. ಪ್ರವೇಶಾತಿಗಾಗಿ ಈಗಾಗಲೇ ವೇಳಾಪಟ್ಟಿ ಪ್ರಕಟಿಸಲಾಗಿದೆ. ಪ್ರಸಕ್ತ ಪ್ರವೇಶಾತಿಯಲ್ಲಿ ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯ ಅಭ್ಯರ್ಥಿಗಳಿಗೆ ಉಲ್ಲೇಖ (2)ರನ್ವಯ 371(ಜೆ) ಪ್ರಕಾರ ಶೇಕಡಾ 70 ರಷ್ಟು ಸೀಟುಗಳನ್ನು ಕಾಯ್ದಿರಿಸಬೇಕಾಗಿದೆ. ಈ ಸಂಬಂಧ ಎಲ್ಲಾ ಮುಖ್ಯಸ್ಥರು ತಮ್ಮ ವಿಭಾಗಳಲ್ಲಿ ಎಂ.ಫಿಲ್./ಪಿಹೆಚ್.ಡಿ. ಪ್ರವೇಶಕ್ಕೆ ಅರ್ಹತೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳು ಸಂದರ್ಶನ (Interview)ಕ್ಕೆ ಹಾಜರಾಗುವ ಸಮಯದಲ್ಲಿ ತಾನು 371(ಜೆ) ಪ್ರಕಾರ ಮೀಸಲಾತಿ ಪಡೆಯಬಯಸಿದಲ್ಲಿ, ಕಡ್ಡಾಯವಾಗಿ 371 (ಜೆ) ಪ್ರಮಾಣಪತ್ರ ಸಲ್ಲಿಸತಕ್ಕದ್ದು ಎಂಬ ವಿಷಯವನ್ನು ಅಭ್ಯರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

ಮುಂದುವರೆದು, ಉಲ್ಲೇಖ (3) ರ ಪ್ರಕಾರ ಹೊರಡಿಸಲಾದ ಅಧಿಸೂಚನೆಯಲ್ಲಿನ ವೇಳಾಪಟ್ಟಿ ಹಾಗೂ ಗೈಡ್‌ಲೈನ್ಸ್‌ಗೆ ಸಂಬಂಧಿಸಿದಂತೆ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಅರ್ಹ ಅಭ್ಯರ್ಥಿಗಳ ಮೆರಿಟ್‌ಲಿಸ್ಟ ತಯಾರಿಸುವಾಗ ಪ್ರಸಕ್ತ ಗೈಡಲೈನ್ಸ್‌ದಲ್ಲಿ ಸೂಚಿಸಿದ ಒಂದೇ ಮೆರಿಟ್‌ಲಿಸ್ಟ್ ಬದಲಾಗಿ, ಈ ಹಿಂದೆ ಪಾಲಿಸುತ್ತಿರುವ (50:25:25) ಸ್ನಾತಕೋತ್ತರ ಮತ್ತು ಪ್ರವೇಶ ಪರೀಕ್ಷೆ ಅಂಕಗಳು, ಎಂ.ಫಿಲ್ ಪದವಿಧರರು ಹಾಗೂ NET/SLET ಪಾಸಾಗಿರುವ ಅಭ್ಯರ್ಥಿಗಳಗಾಗಿ ಪ್ರತ್ಯೇಕ ಮೆರಿಟ್‌ಲಿಸ್ಟ ತಯಾರಿಸುವ ನಿಯಮವನ್ನೆ ಅನುಸರಿಸಲು ಸೂಚಿಸಲಾಗಿದೆ.

21/2/15
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಗೆ,
ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಗುವಿಗು

ಪ್ರತಿ:
1. ಎಲ್ಲಾ ನಿಕಾಯದ ಡೀನರು, ಗು.ವಿ.ಗುಲಬರ್ಗಾ ಇವರ ಮಾಹಿತಿಗಾಗಿ.
2. ಚೀಫ್ ಕೋ-ಆರ್ಡಿನೇಟರ್, ಎಂ.ಫಿಲ್/ಪಿಎಚ್.ಡಿ ಪ್ರವೇಶ ಪರೀಕ್ಷೆ-21014.
3. ಮುಖ್ಯಸ್ಥರು, ಗಣಕಕೇಂದ್ರ, ಗುವಿಗು ಇವರಿಗೆ ಈ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
4. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು ಗು.ವಿ.ಗುಲಬರ್ಗಾ ರವರ ಮಾಹಿತಿಗಾಗಿ

Bos